"Diamond Jubilee Year 1949-2009"
"ವಜ್ರ ಮಹೋತ್ಸವ ವರ್ಷ 1949-2009"

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

**KARNATAK UNIVERSITY, DHARWAD**

NAAC Accredited with "A" Grade 2022

"UNIVERSITY WITH POTENTIAL FOR EXCELLENCE"

ಸಾಮಾನ್ಯ ಆಡಳಿತ ವಿಭಾಗ

G.A.D.

Azadi Ka Amrit Mahotsav

ಪಾವಟೆನಗರ, ಧಾರವಾಡ.

Pavate Nagar, Dharwad.

ದೂರವಾಣಿ ಸಂ.**0836-2215358**

Tel Ph. No.**0836-2215358**

Website : **www.kud.ac.in**

ಕೆಯು/ಜಿಎಡಿ/2022-23/90/776

ದಿನಾಂಕ: 6 FEB 2023

## ಸುತ್ತೋಲೆ

ವಿಷಯ : ಪ್ರಾಣವಿದ್ಯಾ ಯೋಗ ಶಿಬಿರದ ಸುತ್ತೋಲೆ ಹೊರಡಿಸುವ ಕುರಿತು

ಉಲ್ಲೇಖ : 1) ಯೋಗ ಅಧ್ಯಯನ ವಿಭಾಗದ ಪತ್ರ ಸಂಖ್ಯೆ:ಕವಿವಿ/ಪಿ.ಜಿ./ಯೋಗ/2022-23, ದಿನಾಂಕ: 02.02.2023

2) ಕುಲಪತಿಗಳ ಆದೇಶ ದಿನಾಂಕ: 27-01.2023

**************

ಕರ್ನಾಟಕ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಬರುವ ಎಲ್ಲ ಸ್ನಾತಕೋತ್ತರ ವಿಭಾಗಗಳ ಮುಖ್ಯಸ್ಥರಿಗೆ, ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಸೇವೆ ಸಲ್ಲಿಸುತ್ತಿರುವ ಎಲ್ಲ ಶಿಕ್ಷಕ/ಶಿಕ್ಷಕೇತರ ಸಿಬ್ಬಂದಿಗಳಿಗೆ ತಿಳಿಸುವುದೇನೆಂದರೆ, ಶಿಕ್ಷಣದಲ್ಲಿ ಬದಲಾವಣೆ ತರಲು ಒಂದು ಜಾಗೃತ, ವೈಚಾರಿಕ ಆಂದೋಲನಕ್ಕಾಗಿ ಎಲ್ಲರೂ ಸೇರಿ, ಜೊತೆಗೂಡಿ ವಿಚಾರಮಾಡಿ ಮಹಾನ ಕಾರ್ಯದಲ್ಲಿ ಸಂಘಟಿತರಾಗಲು ಸದೃಢರಾಗುವುದು ಅವಶ್ಯವಿದೆ. ಪ್ರತಿಯೊಬ್ಬರ ಸಹಿಭಾಗಿತ್ವ ಮತ ವ್ಯಕ್ತಿಯ ಆಧ್ಯಾತ್ಮಿಕ ಬೆಳವಣಿಗೆಯು ಅಷ್ಟೇ ಬಹು ಮುಖ್ಯವಾಗಿರುವುದರಿಂದ ಇವತ್ತಿನ ಯಾಂತ್ರಿಕ ಒತ್ತಡದ ಜೀವನದಲ್ಲಿ ಹೆಚ್ಚಿನ ದೈಹಿಕ, ಮಾನಸಿಕ, ಸಾಮಾಜಿಕ ಹಾಗೂ ಆಧ್ಯಾತ್ಮಿಕವಾಗಿ ಅನಾರೋಗ್ಯದಿಂದ ನರಳುವುದನ್ನು ತಡೆಗಟ್ಟಿ ನಮ್ಮ ಕೊನೆ ಉಸಿರನವರೆಗೆ ಆರೋಗ್ಯದಿಂದ ಇದ್ದು ನಾಲ್ಕು ಪುರುಷಾರ್ಥಗಳ ಸಾಧನೆಗಾಗಿ ಅನೇಕ ಯೋಗ ಸಾಧನೆ ಮಾಡಿ ವೈಯಕ್ತಿಕ, ಔದ್ಯೋಗಿಕ, ಆಧ್ಯಾತ್ಮಿಕ ಇಂತಹ ಅನೇಕ ಎಲ್ಲ ಸ್ಥಳಗಳಲ್ಲಿ ಸದೃಢತೆಯನ್ನು ಹೊಂದುವುದು, ಶರೀರದಲ್ಲಿರುವ ಪ್ರಾಣ ತತ್ವದ ಜಾಗೃತ ಚೇತನವನ್ನು ಮನಸ್ಸಿಗೆ ಅನುಭವಕ್ಕೆ ತರುವುದು ಸೂಕ್ಷ್ಮ ಶರೀರದಿಂದ ಸ್ಥೂಲ ಶರೀರದ ನಿಯಂತ್ರಣ ಹಾಗೂ ಶರೀರದ ಜೊತೆಗೆ ಮನ, ಬುದ್ಧಿಗೆ ಶಕ್ತಿ ತುಂಬುವ ನೈಜ ಪ್ರಾಕೃತಿಕ ವಿಧಾನವು ಪ್ರಾಣ ವಿದ್ಯೆಯಲ್ಲಿದೆ. ಪ್ರಾಣ ವಿದ್ಯೆ ವರ್ಗದಲ್ಲಿ ಬಹಳ ಸರಳ, ಕಷ್ಟ ರಹಿತ, ಹಿತ ನೀಡುವ, ಗುಣಪಡಿಸುವ ಇನ್ನು ಅನೇಕ ವಿಶೇಷತೆಗಳ ವಿಜ್ಞಾನ ಪ್ರಾಣ ವಿದ್ಯೆ. ಕಾರಣ, ಸದರ ಯೋಗ ಶಿಬಿರವು ಯೋಗ ಅಧ್ಯಯನ ವಿಭಾಗ, ಎನ್.ಎಸ್.ಎಸ್., ಆಯ್.ಕ್ಯೂ.ಎ.ಸಿ, ಬಿ.ಎಸ್.ಎಂ ಇವರುಗಳ ಸಂಯುಕ್ತಾಶ್ರಯದಲ್ಲಿ ಜರುಗಲಿದ್ದು ಈ ಪ್ರಾಣ ವಿದ್ಯಾ ವರ್ಗವು ಭಾರತೀಯ ಶಿಕ್ಷಣ ಮಂಡಳದ ಪ್ರಮುಖರಿಂದ ಜರುಗಿಸಲಾಗುವುದು. ನಮ್ಮ ಭಾರತ ದೇಶವನ್ನು ವಿಶ್ವಗುರುವಿನ ಗೌರವ ಸ್ಥಾನದಲ್ಲಿ ಕೂಡಿಸಲು ಭಾರತದ ಪುನರುತ್ಥಾನಕ್ಕಾಗಿ ಮತ್ತು ನಾವು ನಮ್ಮೆಲ್ಲ ಭವಬಂಧನಗಳಿಂದ ಮುಕ್ತರಾಗಲು ಭಾರತೀಯ ಶಿಕ್ಷಣ ಮಂಡಳವು ಕಾರ್ಯ ಮಾಡುತ್ತಿರುವುದು.

ಈ ಪ್ರಾಣ ವಿದ್ಯಾ ವರ್ಗವು ವಿಶೇಷವಾಗಿ ವಿಶ್ವವಿದ್ಯಾಲಯದ ಶಿಕ್ಷಕ/ಶಿಕ್ಷಕೇತರ, ಎನ್.ಎಸ್.ಎಸ್., ಆಯ್.ಕ್ಯೂ.ಎ.ಸಿ, ಬಿ.ಎಸ್.ಎಂ ಇವರುಗಳಿಗೆ ಮಾತ್ರ ಸಂಘಟಿಸಲಾಗಿದ್ದು ಸದರ ವರ್ಗವು ದಿನಾಂಕ: 07.02.2023 ರಂದು ಬೆಳಗ್ಗೆ 5.50 ರಿಂದ 7.10 ರ ವರೆಗೆ ಕವಿವಿ ಸಿನೇಟ್ ಹಾಲಿನಲ್ಲಿ ಭೌತಿಕ ವರ್ಗ ಇರುವುದು. (offline ಉದ್ಘಾಟನಾ ಕಾರ್ಯಕ್ರಮ) ದಿನಾಂಕ: 08.02.2023 ರಿಂದ 13.02.2023 ರ ವರೆಗೆ ಆನ್‌ಲೈನ್ ವರ್ಗಗಳು ಇರುವವು. ಕಾರಣ ಸದರ ಶಿಬಿರಕ್ಕೆ ವಿಶ್ವವಿದ್ಯಾಲಯದ ಎಲ್ಲ ಶಿಕ್ಷಕ/ಶಿಕ್ಷಕೇತರ ಸಿಬ್ಬಂದಿಗಳು ಹಾಜರಿರುವಂತೆ ಈ ಮೂಲಕ ತಿಳಿಸಲಾಗಿದೆ.

ಸದರ ಶಿಬಿರದಲ್ಲಿ ಪಾಲ್ಗೊಳ್ಳಲು ಈ ಕೆಳಗಿನ ಸೂಚನೆಗಳು ಪಾಲಿಸುವುದು ಅವಶ್ಯವಿರುತ್ತದೆ.

1. **ತಾವೆಲ್ಲರೂ 5 ನಿಮಿಷ ಮುಂಚಿತವಾಗಿ ಉದ್ಘಾಟನಾ ಕಾರ್ಯಕ್ರಮಕ್ಕೆ ಹಾಜರಿರುವುದು.**
2. **Online Google meet join ಆಗುವಾಗ ತಮ್ಮ ಆಡಿಯೋ/ವಿಡಿಯೋ ಆಫ್ ಮಾಡಿ ಇಡುವುದು ಕಡ್ಡಾಯ.**
3. **ತಮ್ಮೊಂದಿಗೆ ಯೋಗ ಮ್ಯಾಟ ಇದ್ದರೆ ತರುವುದು ಸೂಕ್ತ.**
4. **Google meet link- https:/forms.gle/ubc9t3HjlaXRq3g3A**
5. **ಈ ವರ್ಗಕ್ಕೆ ಶಿಕ್ಷಕ/ಶಿಕ್ಷಕೇತರ, ಎನ್.ಎಸ್.ಎಸ್., ಆಯ್.ಕ್ಯೂ.ಎ.ಸಿ, ಬಿ.ಎಸ್.ಎಂ ಸಿಬ್ಬಂದಿಯವರು ಮಾತ್ರ ಹಾಜರಾಗುವುದು.**
6. **ಯೋಗ ಸಾಧನೆಗೆ ಸೂಕ್ತ ಉಡುಪಿನಲ್ಲಿದ್ದರೆ ಉತ್ತಮ.**

6/2/23

ಕುಲಸಚಿವರು

(ಪು.ತಿ.ನೋ.)

ಗೆ,

1. ಕುಲಸಚಿವರು (ಮೌಲ್ಯಮಾಪನ), ಕ.ವಿ.ವಿ, ಧಾರವಾಡ.
2. ಹಣಕಾಸು ಅಧಿಕಾರಿಗಳು, ಕ.ವಿ.ವಿ., ಧಾರವಾಡ.
3. ಸಿಂಡಿಕೇಟ ಸದಸ್ಯರು, ಕವಿವಿ ಧಾರವಾಡ.
4. ವಿದ್ಯಾವಿಷಯತ ಪರಿಷತ್ ಸದಸ್ಯರು, ಕವಿವಿ ಧಾರವಾಡ.
5. ಗ್ರಂಥಪಾಲಕರು, ಪ್ರೊ. ಶಿ. ಶಿ. ಬಸವನಾಳ ಗ್ರಂಥಾಲಯ, ಕ.ವಿ.ವಿ, ಧಾರವಾಡ.
6. ಎಲ್ಲ ಸ್ನಾತಕೋತ್ತರ ಹಾಗೂ ಆಡಳಿತ ವಿಭಾಗಗಳ ಮುಖ್ಯಸ್ಥರುಗಳು, ಕ.ವಿ.ವಿ, ಧಾರವಾಡ.
7. ಆಡಳಿತಾಧಿಕಾರಿಗಳು, ಕವಿವಿ ಸ್ನಾತಕೋತ್ತರ ಕೇಂದ್ರಗಳು, ಗದಗ, ಹಾವೇರಿ ಹಾಗೂ ಕಾರವಾರ.
8. ಎಲ್ಲ ನಿರ್ದೇಶಕರು/ಸಂಯೋಜಕರು/ನೋಡಲ್ ಅಧಿಕಾರಿಗಳು, ಕ.ವಿ.ವಿ, ಧಾರವಾಡ.
9. ಎಲ್ಲ ಪ್ರಾಚಾರ್ಯರು, ಕ.ವಿ.ವಿ, ಅಧೀನ ಮಹಾವಿದ್ಯಾಲಯಗಳು, ಧಾರವಾಡ.
10. ಎಲ್ಲ ಉಪಕುಲಸಚಿವರು, ಕ.ವಿ.ವಿ, ಧಾರವಾಡ.
11. ಸ್ಥಾನಿಕ ಅಭಿಯಂತರರು, ಕ.ವಿ.ವಿ, ಧಾರವಾಡ.
12. ಎಲ್ಲ ವಸತಿ ನಿಲಯಗಳ ನಿಲಯಪಾಲಕರು, ಕ.ವಿ.ವಿ, ಧಾರವಾಡ.
13. ಪ್ರಾಚಾರ್ಯರು, ಕ.ವಿ.ವಿ, ಪಿ.ಯು. ಕಾಲೇಜು ಹಾಗೂ ಮಾಧ್ಯಮಿಕ ಶಾಲೆ ಧಾರವಾಡ.
14. ಮುಖ್ಯೋಪಾಧ್ಯಾಯರು, ಕ.ವಿ.ವಿ, ಪ್ರಾಥಮಿಕ ಶಾಲೆ ಕ.ವಿ.ವಿ, ಆವರಣ ಧಾರವಾಡ.
15. ಅಧ್ಯಕ್ಷರು, ಸ್ನಾತಕೋತ್ತರ ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ ವಿಭಾಗ, ಕ.ವಿ.ವಿ., ಧಾರವಾಡ.

ಪ್ರತಿ ಮಾಹಿತಿಗಾಗಿ:

1. ಕುಲಪತಿಗಳ ಆಪ್ತ ಕಾರ್ಯದರ್ಶಿಗಳು, ಕುಲಪತಿಗಳ ಕಾರ್ಯಾಲಯ, ಕ.ವಿ.ವಿ, ಧಾರವಾಡ.
2. ಕುಲಸಚಿವರ ಆಪ್ತ ಸಹಾಯಕರು, ಕುಲಸಚಿವರ ಕಾರ್ಯಾಲಯ, ಕ.ವಿ.ವಿ, ಧಾರವಾಡ.
3. ಆಪ್ತ ಕಾರ್ಯದರ್ಶಿಗಳು, ಕುಲಸಚಿವರು (ಮೌಲ್ಯಮಾಪನ), ಕ.ವಿ.ವಿ. ಧಾರವಾಡ.
4. ಹಣಕಾಸು ಅಧಿಕಾರಿಗಳ, ಆಪ್ತ ಕಾರ್ಯದರ್ಶಿಗಳು, ಕ.ವಿ.ವಿ., ಧಾರವಾಡ.